ಕರ್ನಾಟಕ ವಿಧಾನಸಭೆ

ಸೋಮವಾರ ೨೪ನೇ ಏಪ್ರಿಲ್ ೨೦೦೦ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧.೧೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಎಂ.ವಿ.ವೆಂಕಟಪ್ಪ) ಅವರು ಪೀಠವನ್ನು ಅಲಂಕರಿಸಿದ್ದರು.

೧. ಸಂತಾಪ ಸೂಚನೆ

ವಿಷಯ: ಶ್ರೀ ಕೆ.ಎಸ್.ಮಲ್ಲಿಕಾರ್ಜುನ ಪ್ರಸನ್ನರವರ ನಿಧನ

ಅಧ್ಯಕ್ಷರು: ಮೊದಲನೆಯದಾಗಿ ಒಂದು ಸಂತಾಪ ಸೂಚನೆ ಇದೆ. ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಕೆ.ಎಸ್.ಮಲ್ಲಿಕಾರ್ಜುನ ಪ್ರಸನ್ನ ಅವರು 1938 ಫೆಬ್ರವರಿ 17ರಂದು ಬೀರೂರಿನಲ್ಲಿ ಜನಿಸಿದ್ದು, ಅವರು ಕಲಾ ಹಾಗೂ ಕಾನೂನು ಪದವೀಧರರು ಆಗಿದ್ದರು. ವೃತ್ತಿಯಲ್ಲಿ ಕೃಷಿಕರು ಹಾಗೂ ವಕೀಲರು ಆಗಿದ್ದ ಶ್ರೀಯುತರು ಬೀರೂರು ನಗರಸಭೆಯ ಹಾಗೂ ಚಿಕ್ಕಮಗಳೂರು ಜನತಾ ಬಜಾರ್‌ನಲ್ಲಿ ಅಧ್ಯಕ್ಷರಾಗಿದ್ದರು. 1989 ರಲ್ಲಿ ಒಂಭತ್ತನೆ ವಿಧಾನಸಭೆಗೆ ಬೀರೂರು ಕ್ಷೇತ್ರದಿಂದ ಆಯ್ಕೆಯಾಗಿ, ಸಣ್ಣ ನೀರಾವರಿ ರಾಜ್ಯ ಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು ದಿನಾಂಕ 22.4.2000 ರಂದು ನಿಧನ ಹೊಂದಿದರು. ದಿವಂಗತರಾದ ಶ್ರೀ ಕೆ.ಎಸ್.ಮಲ್ಲಿಕಾರ್ಜುನ ಪ್ರಸನ್ನರವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಈ ಹಂತದಲ್ಲಿ ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು: ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯ ಪ್ರತಿಯನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು. ಈಗ ಪ್ರಶ್ನೋತ್ತರ ವೇಳೆ.